<u>ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ</u>

ಓ ಎಸ್ ಃ ೨೮೦/೨೦೧೩

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಎಮ್ ಆರ್ ನಾಗರಾಜ | ಪಿ ಡಬ್ಲ್ಯೂಃ ೧ |
| ತಂದೆಯ ಹೆಸರು | ಃ | ಲೇಟ್ ರಾಮಣ್ಣ | ಡಿ ಡಬ್ಲ್ಯೂಃ |
| ವಯಸ್ಸು | ಃ | ೪೬ ವರ್ಷ | ಪ್ರಮಾಣ ವಚನ ನೀಡಲಾದ |
| ಉದ್ಯೋಗ | ಃ | ತಹಶೀಲ್ದಾರರು | ದಿನಾಂಕಃ ೩೦.೦೪.೨೦೧೪ |
| ವಾಸಸ್ಥಳ | ಃ | ಹರಪನಹಳ್ಳಿ | |

<u>ಮುಖ್ಯ ವಿಚಾರಣೆ ಃ</u> ಪ್ರತಿವಾದಿ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ

ನಾನು ದಿ.೦೭.೦೩.೨೦೧೪ ರಿಂದ ಇಲ್ಲಿಯವರೆಗೆ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಕೇಳಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ೨೦೧೧ ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅನರ್ಹ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.೨ ಎಂದು ಗುರುತಿಸಲಾಯಿತು. ೧ನೇ ಪ್ರತಿವಾದಿ ವಿಶಾಲಕ್ಷಮ್ಮ ರವರ ಹೆಸರಿಗೆ ಮಂಜೂರಾದ ನಿವೇಶನದ ಸಂಖ್ಯೆ ೧೮೩ ರ ಹಕ್ಕುಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದಲ್ಲು ಅದನ್ನು ನಿಡಿ.೩ ಎಂದು ಗುರುತಿಸಲಾಯಿತು. ೨೦೧೨ ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅರ್ಹರ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.೪ ಎಂದು ಗುರುತಿಸಲಾಯಿತು. ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ ಸಂಪರ್ಕ ಕಲ್ಪಿಸಲು ಕೋರಿಕೊಂಡ ಪತ್ರ ಮತ್ತು ಫಲಾನುಭವಿಗಳ ಹೆಸರುಗಳ ಪಟ್ಟಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.೫ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ವಾದಿ ಪರ ಶ್ರೀ ಜಿ ಸಿ ಜಿ ವಕೀಲರಿಂದ ಃ

ಮನೆ ಸಂಖ್ಯೆ.೧೮೩ ಕ್ಕೆ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳು ನಮ್ಮ ಕಛೇರಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

O.S:64/2011
D W : 1
Date: 4.4.2015

ಸಿವಿಲ್ ಜಡ್ಜ್ , ಹರಪನಹಳ್ಳಿ.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ ೨೬.೦೩.೨೦೧೫

ಮುಂದುವರೆದ ಮುಖ್ಯ ವಿಚಾರಣೆ ಃಪ್ರತಿವಾದಿ ಪರ ಶ್ರೀ ಬಿಹೆಚ್ ವಕೀಲರಿಂದ ಃ

ನಾನು ಈ ದಾವೆಯಲ್ಲಿ ೧ನೇ ಪ್ರತಿವಾದಿ ಇರುತ್ತೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ವಿಷಯ ನಿಜ ಮತ್ತು ಸತ್ಯ ಇರುತ್ತವೆ. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಹಾಜರುಪಡಿಸಿರುವ ಎಲ್ಲ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ದಿ.೧೫.೨.೧೯೬೫ ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.೧ ಎಂದು ಗುರುತಿಸಲಾಯ್ತು. ದಾವಾಸ್ತಿ ಸರ್ವೆ ನಂ.೮೪ಃಬಿ ಆಸ್ತಿಗೆ ಸಂಬಂಧಿಸಿದ ರುಣಭಾರ ರಹಿತ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ.೨ ಎಂದು ಗುರುತಿಸಲಾಯ್ತು. ದಾವಾಸ್ತಿ ಸರ್ವೆ ನಂ.೭ಃಡಿ ಗೆ ಸಂಬಂಧಿಸಿದ ಐದು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.೩ ರಿಂದ ೭ ಎಂದು ಗುರುತಿಸಲಾಯ್ತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಕೆಎ ವಕೀಲರಿಂದಃ

ನನ್ನ ಗಂಡ ತೀರಿಕೊಂಡು ಸುಮಾರು ೨೦ ವರ್ಷಗಳಾಗಿರುತ್ತವೆ. ನನ್ನ ಗಂಡ ಜೀವಂತ ಇದ್ದಾಗ ನನ್ನ ಕುಟುಂಬಂಕ್ಕೆ ಐದು ಎಕರೆ ಜಮೀನು ಒಂದು ಮನೆ, ಒಂದು ಖಣ ಇತ್ತು. ನನಗೆ ನಾಲ್ಕು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಕೊಟ್ರಮ್ಮ ಎನ್ನುವವಳು ತೀರಿಕೊಂಡಿರುತ್ತಾಳೆ, ಉಳಿದವರು ಜೀವಂತ ಇರುತ್ತಾರೆ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಸಿ ಹಾಕಿರುತ್ತೇನೆ. ೪ನೇ ವಾದಿ ನಾಗಪ್ಪ ಈತನು ಅವನ ಮೊದಲನೇ ಹೆಂಡತಿಯನ್ನು ಬಿಡುಗಡೆ ಮಾಡಿಕೊಂಡು ಆಕೆಗೆ ಪರಿಹಾರ ಕೊಟ್ಟಿರುತ್ತಾನೆಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಾಗಪ್ಪ ಈತನು ಆಸ್ತಿಯಲ್ಲಿ ಭಾಗ ಪಡೆದುಕೊಂಡು ಆಕೆಗೆ ಪರಿಹಾರ ಕೊಟ್ಟಿರುತ್ತಾನೆ. ಸದರಿ ನಾಲ್ಕನೇ ವಾದಿ ನಾಗಪ್ಪ ಈತನು ಅವನ ಮೊದಲನೇ ಹೆಂಡತಿಯಿಂದ ಬಿಡುಗಡೆ ಮಾಡಿಕೊಂಡು ಸುಮಾರು ೧೫ ವರ್ಷಗಳಾಗಿರುತ್ತವೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಯಾವ ದಿನಾಂಕ, ಯಾವ ತಿಂಗಳು ಮತ್ತು ಯಾವ ವರ್ಷ ಪಾಲುವಿಭಾಗ ಮಾಡಿಕೊಂಡಿದ್ದೀರಿ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೀರಿ ಎಂದರೆ ಸಾಕ್ಷಿಯು ಬರೆಸಿರುತ್ತೇನೆಂದು ಹೇಳುತ್ತಾರೆ. ನಾವು ಪಾಲುವಿಭಾಗ ಮಾಡಿಕೊಂಡು ಸುಮಾರು ೧೫ ವರ್ಷಗಳಾಗಿರುತ್ತವೆ. ೧೫ ವರ್ಷಗಳ ಹಿಂದೆ ನಾನು, ನನ್ನ ಮಕ್ಕಳು, ನನ್ನ ಗಂಡ ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಹೊಸದಾಗಿ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ ಎಂದರೆ ಸರಿ. ಎಲ್ಲಾ ಆಸ್ತಿಗಳು ನನ್ನ ಗಂಡನ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಸದರಿ ಪಾಲುವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಬರೆದಿರುತ್ತೇವೆ. ಸದರಿ ಪಾಲುವಿಭಾಗ ಪತ್ರದ ದಾಖಲೆಯ

ಆಧಾರದ ಮೇಲೆ ಎಲ್ಲರೂ ತಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿಸಿರುತ್ತೀರಾ ಎಂದರೆ ಸಾಕ್ಷಿಯು ನಮಗೆ ಬಂದ ಹಿಸ್ಸೆಯ ಆಸ್ತಿಯನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಸಿರುತ್ತೇನೆ ಅವರೂ ಕೂಡಾ ಹಿಸ್ಸೆಗೆ ಬಂದ ಆಸ್ತಿಗಳನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಕೊಂಡಿರುತ್ತಾರೆ. ಈ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬದ ಜಮೀನುಗಳ ಸರ್ವೆನಂಬರ್ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನುಗಳ ಸರ್ವೆ ನಂಬರುಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಈಗ ಸದ್ಯ ನನ್ನ ಮಗಳು ೨ನೇ ಪ್ರತಿವಾದಿ ರೇಣುಕಮ್ಮಳ ಮನೆಯಲ್ಲಿ ಸುಮಾರು ಮೂರು ವರ್ಷಗಳಿಂದ ವಾಸವಾಗಿರುತ್ತೇನೆ. ಸದರಿ ರೇಣುಕಮ್ಮಳ ಗಂಡ ಖಾಸಗಿ ಬಸ್ ಚಾಲಕನಿರುತ್ತಾನೆ. ಸದರಿ ರೇಣುಕಮ್ಮಳ ಗಂಡ ದಿನಾಲೂ ಕೆಲಸಕ್ಕೆ ಹೋಗಿ ಮತ್ತೆ ವಾಪಾಸ್ ಮನೆಗೆ ಬರುತ್ತಾನೆ. ೨ನೇ ಪ್ರತಿವಾದಿ ರೇಣುಕಮ್ಮ ಇವಳಿಗೆ ಗಂಡನ ಮನೆಯಲ್ಲಿ ಆಸ್ತಿಗಳು ಇರುತ್ತವೆ. ದಾವಾಸ್ತಿಯಲ್ಲಿಯ ೧ ಎಕೆರೆ ೮೭ ಸೆಂಟ್ಸ ಜಮೀನನ್ನು ೨ನೇ ಪ್ರತಿವಾದಿ ನನ್ನ ಮಗಳಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ . ಆದರೆ ಸದರಿ ಮಾರಾಟ ಮಾಡಿದ ಹಣವನ್ನು ನಾನು ಪಡೆದಿರುವುದಿಲ್ಲ , ನನ್ನ ಮಕ್ಕಳಾದ ೧ನೇ ಮತ್ತು ೪ನೇ ವಾದಿಗಳು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಾನು ಈ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲುನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

O.S:64/2011<br>D W : 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ ೨೮.೦೩.೨೦೧೫

<u>ಮುಂದುವರೆದ ಪಾಟೀ ಸವಾಲು</u> ಃವಾದಿ ಪರ ಶ್ರೀ ಎಕೆಎ ವಕೀಲರಿಂದ ಃ

ನನ್ನ ತಕರಾರಿನಲ್ಲಿ ನಾನು ನನ್ನ ಮಕ್ಕಳು ನನ್ನಿಂದ ಹಣವನ್ನು ಪಡೆದಿರುತ್ತಾರೆಂದು ಹೇಳಿರುತ್ತೇನೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಣ್ಣುಮಕ್ಕಳ ಮದುವೆ ಸಮಯದಲ್ಲಿ ನನ್ನ ಗಂಡ

ಜೀವಂತ ಇದ್ದರು. ನನ್ನ ಗಂಡ ತೀರಿಕೊಂಡ ನಂತರ ಮನೆಯ ಯಜಮಾನಿಕೆಯನ್ನು ನನ್ನ ಮಕ್ಕಳಾದ ನಾಗಪ್ಪ ಮತ್ತು ಪ್ರಭಪ್ಪ ಮಾಡುತ್ತಾರೆಂದರೆ ಸರಿ. ಸದರಿ ನನ್ನ ಮಕ್ಕಳು ಜಮೀನುಗಳಲ್ಲಿ ಬಿತ್ತುವುದು, ಬೆಳೆಯುವುದು , ಸಾಲ ಪಡೆದುಕೊಳ್ಳುವುದು ಮತ್ತು ಕೊಡುವುದು ಅವರೇ ಮಾಡುತ್ತಾರೆಂದರೆ ಸರಿ. ನನ್ನ ಗಂಡ ತೀರಿಕೊಂಡ ಸಮಯದಲ್ಲಿ ನಮ್ಮ ಕುಟುಂಬದ ಆಸ್ತಿಗಳು ನನ್ನ ಗಂಡನ ಹೆಸರಿನಲ್ಲಿಯೇ ಇದ್ದವು ಎಂದರೆ ಸರಿ. ನಂತರ ಎಲ್ಲಾ ಆಸ್ತಿಗಳು ನನ್ನ ಹೆಸರಿಗೆ ಬದಲಾವಣೆಯಾಗಿರುತ್ತವೆ. ನನ್ನ ಗಂಡು ಮಕ್ಕಳ ಹೆಸರು ನನ್ನ ಹೆಸರಿನ ಜೊತೆ ಜಂಟಿಯಾಗಿ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿರುವುದಿಲ್ಲ. ದಾವಾಸ್ತಿಗಳ ಪೈಕಿ ೮೪ಬಿ ವಿಸ್ತೀರ್ಣ ೧.೮೭ ಎಕರೆ ಮತ್ತು ಸರ್ವೆ ನಂ.೭ಡಿ ವಿಸ್ತೀರ್ಣ ೧.೦೦ ಎಕರೆ ಜಮೀನುಗಳನ್ನು ನಾವೆಲ್ಲಾ ಒಟ್ಟು ಕುಟುಂಬದಲ್ಲಿದ್ದಾಗ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಗುರುಪಾದಪ್ಪ ಇವರಿಗೆ ಮಾರಾಟ ಮಾಡಿದ ಜಮೀನಿನ ಕುರಿತು ಕ್ರಯಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸರ್ವೆ ನಂ.೮೪ಬಿ ವಿಸ್ತೀರ್ಣ ೧.೮೭ ಎಕರೆ ಜಮೀನಿನ ಕ್ರಯಪತ್ರಕ್ಕೆ ನನ್ನ ಮಕ್ಕಳಾದ ನಾಗಪ್ಪ ಮತ್ತು ಪ್ರಭಪ್ಪ ಸಹಿ ಮಾಡಿರುವುದಿಲ್ಲ. ನಾನು ಗುರುಪಾದಪ್ಪ ಇವರಿಗೆ ಸರ್ವೆ ನಂ.೭ಡಿ ವಿಸ್ತೀರ್ಣ ೧.೦೦ ಎಕರೆ ಜಮೀನಿನನ್ನು ಕುರಿತು ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ೭ಡಿ ಸರ್ವೆ ನಂಬರ್ ಜಮೀನಿನನ್ನು ನಾಗಪ್ಪನ ಕುಟುಂಬವು ಸರಿಯಿಲ್ಲದ ಕಾರಣ ನಾವೆಲ್ಲರೂ ಕೂಡಿ ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ೭ಡಿ ಸರ್ವೆ ನಂಬರ ಆಸ್ತಿಯನ್ನು ನಾವೆಲ್ಲರೂ ಕೂಡಿ ಮಾರಾಟ ಮಾಡಿರುತ್ತೇವೆ ಆದ್ದರಿಂದ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.೮೪ಬಿ೨ ವಿಸ್ತೀರ್ಣ ೧.೮೭ ಎಕರೆ ಜಮೀನು ನನ್ನ ಹಿಸ್ಸೆಗೆ ಬಂದಿರುತ್ತದೆ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

O.S:64/2011
D W : 1
Date: 4.4.2015

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ ೦೪.೦೪.೨೦೧೫

ಪಾಟೀ ಸವಾಲುಃ ವಾದಿ ಪರ ಶ್ರೀ ಎಕೆಎ ವಕೀಲರಿಂದಃ

ಸರ್ವೆ ನಂ.೮೪:ಬಿ೨ ರಲ್ಲಿ ೧ ಎಕರೆ ೮೭ ಸೆಂಟ್ಸ ಜಮೀನನ್ನು ನಾನೇ ಮಾರಾಟ ಮಾಡಿ ನಾನೇ ಹಣ ತೆಗೆದುಕೊಂಡು ೨ನೇ ಪ್ರತಿವಾದಿ ರೇಣುಕಮ್ಮ ಇವಳಿಗೆ ಸದರೀ ಜಮೀನನ್ನು ಸ್ವಾಧೀನ ಕೊಟ್ಟಿರುತ್ತೇನೆ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿ. ಸಾಕ್ಷಿ ಮುಂದುವರಿದು ಹೇಳುವುದೇನೆಂದರೆ ಎಲ್ಲರೂ ಕೂಡಿ ಮಾರಾಟ ಮಾಡಿರುತ್ತೇವೆ, ಎಲ್ಲರೂ ಹಣ ಪಡೆದಿರುತ್ತಾರೆ, ಆದರೆ

O.S:64/2011
D W : 1
Date: 4.4.2015

ಸಹಿ ಮಾತ್ರ ನಾನೊಬ್ಬಳೇ ಮಾಡಿರುತ್ತೇನೆ. ಈ ರೀತಿ ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆಂದರೆ ಸರಿ. ನಾನು ೨ನೇ ಪ್ರತಿವಾದಿಗೆ ಸದರೀ ಆಸ್ತಿಯನ್ನು ಸ್ವಾಧೀನ ಕೊಟ್ಟ ನಂತರ ಯಾರಾದರೂ ತಕರಾರು ಮಾಡಿದ್ದಾರೆಯೇ ಎಂದರೆ ವಾದಿಗಳು ತಕರಾರು ಮಾಡಿರುತ್ತಾರೆಂದು ಹೇಳುತ್ತಾರೆ. ೨ನೇ ಪ್ರತಿವಾದಿ ವಾದಿಗಳ ವಿರುದ್ಧ ದಾವಾ ಆಸ್ತಿಯಲ್ಲಿ ತಕರಾರು ಮಾಡಿದ್ದಕ್ಕೆ ಕೇಸನ್ನು ಹಾಕಿರುತ್ತಾಳೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಾನು ವಾದಿಗಳಿಗೆ ಆಸ್ತಿ ಕೊಡಬೇಕಾಗುತ್ತದೆಂದು ಹೇಳಿ ಸರ್ವೆ ನಂ.೮೪:ಬಿ೨ ರಲ್ಲಿ ೧ ಎಕರೆ ೮೭ ಸೆಂಟ್ಸ ಜಮೀನನ್ನು ೨ನೇ ಪ್ರತಿವಾದಿ ನನ್ನ ಮಗಳಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಇಲ್ಲಿಯವರೆಗೆ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಗಂಡ ತೀರಿಕೊಂಡ ಮೇಲೆ ನಮ್ಮ ಮನೆಯ ವ್ಯವಹಾರವನ್ನು ೪ನೇ ವಾದಿ ನೋಡಿಕೊಳ್ಳುತಿದ್ದ , ಅವನ ಹೆಂಡತಿಗೆ ಆರೋಗ್ಯ ಸಮಸ್ಯೆ ಆಗಿದ್ದರಿಂದ ನಾವೆಲ್ಲರೂ ಕೂಡಿ ಸರ್ವೆ ನಂ.೬೩ ವಿಸ್ತೀರ್ಣ ೮೭ ಸೆಂಟ್ಸ ಎಲ್ಲರೂ ಕೂಡಿ ಏಕತ್ರ ಕುಟುಂಬದಲ್ಲಿದ್ದಾಗ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹೇಳುವುದೇನೆಂದರೆ ೪ನೇ ವಾದಿ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದು ಹೇಳುತ್ತಾರೆ. ಸದರಿ ಜಮೀನನ್ನು ಏಕತ್ರ ಕುಟುಂಬದಲ್ಲಿದ್ದಾಗ ಮಾರಾಟ ಮಾಡಿದ್ದರಿಂದ ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾಸ್ತಿಗಳಲ್ಲಿ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಸಮಾನ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಚೋಟಗಿ ಗುರುಪಾದಪ್ಪ ಮತ್ತು ರೇವಣಸಿದ್ದಪ್ಪ ಮಾರಾಟಗಾರರನ್ನು ವಿಚಾರಣೆ ಮಾಡಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ತೊಂದರೆ ಇರುತ್ತದೆ ಎಂದು ಹೇಳುತ್ತಾರೆ. ಅವರನ್ನು ಈ ದಾವೆಯಲ್ಲಿ ಸಾಕ್ಷಿಗಳನ್ನಾಗಿ ಮಾಡಿದರೆ ಅವರು ನನಗೆ ಮಾರಾಟ ಮಾಡಿರುತ್ತಾರೆಂದು ಹೇಳುತ್ತಾರೆಂದು ತಿಳಿದು ಅವರನ್ನು ಸಾಕ್ಷಿ ವಿಚಾರಣೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ೨ನೇ ಪ್ರತಿವಾದಿ ಮಾರಾಟ ಮಾಡಿದ ಜಮೀನು ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದು ಬರೆಸಿರತ್ತೇನೆ ಎಂದರೆ ಸರಿ. ದಾವಾ ಆಸ್ತಿ ನಂ.೨ ಜಮೀನನ್ನು ಎಲ್ಲರೂ ಕೂಡಿ ಮಾರಾಟ ಮಾಡಿರುತ್ತೇವೆ ಆದರೆ ಹಣವನ್ನು ವಾದಿಗಳು ಮಾತ್ರ ಪಡೆದಿರುತ್ತಾರೆ. ನಾನು ವಾದಿಗಳಿಗೆ ಹಿಸ್ಸೆ ಕೊಡಬೇಕಾಗುತ್ತದೆಂದು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

O.S:64/2011
D W : 1
Date: 4.4.2015